<u>ಸಾಕ್ಷಿಯನ್ನು ದಿಃ **26.07.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎನ್.ಎ ವಕೀಲರಿಂದ:</u>

ವಾದಿಯ ಪರಿಚಯವಿದೆ. ವಾದಿಯು ನಮ್ಮ ದೊಡ್ಡ ತಾತನ ಮೊಮ್ಮಗ. ವಾದಿಯು ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಪ್ರತಿವಾದಿಯು ನನ್ನ ಒಡಹುಟ್ಟಿದ ಸಹೋದರ. ಪ್ರತಿವಾದಿಯು ಆರೋಗ್ಯವಾಗಿ ರಾಜಕೀಯವಾಗಿ ಸಕ್ರೀಯವಾಗಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನ್ಯಾಯಾಲಯಕ್ಕೆ ಬರಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ಹೇಳುವಂತೆ ಯಾವುದೇ ಅನಾರೋಗ್ಯ ಸಮಸ್ಯೆ ಇರದೆ ನ್ಯಾಯಾಲಯಕ್ಕೆ ಬರುವುದನ್ನು ತಪ್ಪಿಸಲು ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯ ಅನಾರೋಗ್ಯದ ಕುರಿತು ಬರೆಸಿರುತ್ತೇನೆ. ನಾನು ಈ ಕುರಿತು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ನ್ಯಾಯಾಲಯಕ್ಕೆ 3 ಮುದ್ದತಗಳಿಂದ ಬರುತ್ತಿದ್ದೇನೆ. ಅದಕ್ಕೂ ಮೊದಲು ಪ್ರತಿವಾದಿಯೇ ಬರುತ್ತಿದ್ದರು. ಪ್ರತಿವಾದಿಯು ಆರೋಗ್ಯವಾಗಿರುವುದರಿಂದ 2016 ರಿಂದ ನ್ಯಾಯಾಲಯಕ್ಕೆ ಅವರೇ ಹಾಜರಾಗುತ್ತಿದ್ದು ವಿಚಾರಣೆಯನ್ನು ತಪ್ಪಿಸಿಕೊಳ್ಳಲು ನನಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ವಂಶದ ಮೂಲ ಪುರುಷ ಲಕ್ಕಣ್ಣಗೌಡ. ಸದರಿಯವರನ್ನು ನಾನು ನೋಡಿರುವುದಿಲ್ಲ. ನಾನು ನನ್ನ ತಾತನನ್ನು ನೋಡಿರುತ್ತೇನೆ. ಲಕ್ಕಣ್ಣಗೌಡರ ಬಗ್ಗೆ ನನ್ನ ತಾತ, ನನ್ನ ತಂದೆ-ತಾಯಿಯವರಿಂದ ತಿಳಿದುಕೊಂಡಿರುತ್ತೇನೆ. ನನ್ನ ತಾತನ ಹೆಸರು

ಗೌಡಯ್ಯ ಊರುಫ್ ಗೌಡಪ್ಪ. ನಮ್ಮ ತಾತನಿಗೆ ತಿಬ್ಬಮ್ಮ ಎಂಬ ಒಬ್ಬಳೇ ಹೆಂಡತಿ. ಸದರಿಯವರಿಗೆ ಒಂದನೇ ಬಜ್ಜಯ್ಯ ಊರುಫ್ ಲಕ್ಕಣ್ಣ, 2 ನೇ ಮಗ ಹುಚ್ಚಯ್ಯ ಊರುಫ್ ಕೆಂಪಣ್ಣ ಅಂದರೆ ನಮ್ಮ ತಂದೆ, 3 ನೇ ಮಗ ಲಕ್ಕಪ್ಪ, 4 ನೇ ಮಗ ಚಿಕ್ಕಲಕ್ಕಯ್ಯ ಊರುಫ್ ರಾಮಯ್ಯ.

ನನ್ನ ತಾತನವರಿಗೆ 4 ಜನ ಸಹೋದರರು. ಅವರುಗಳೆಂದರೆ 1. ಚಿಕ್ಕಲಕ್ಕೇಗೌಡ, 2.ಜವರೇಗೌಡ, 3.ನಮ್ಮ ತಾತ ಗೌಡಯ್ಯ ಊರುಫ್ ಗೌಡಪ್ಪ, 4. ಅವಿವಾಹಿತರಾಗಿದ್ದ ಅಯ್ಯಣ್ಣ. ಈ ಮೇಲಿನ 4 ಜನ ಸಹೋದರರು ಸುಮಾರು 70-80 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿಯವರಿಗೆ ಬಂದ ಆಸ್ತಿಗಳ ವಿವರ ನನಗೆ ಗೊತ್ತು. ನಮ್ಮ ತಾತನವರಿಗೆ ಸರ್ವೇ ನಂ.46 ರಲ್ಲಿ 1 ಎಕರೆ 11 ಗುಂಟೆ, 46/5 ರಲ್ಲಿ ಮನೆಯಿದ್ದ ಜಾಗ ಮತ್ತು ಒಂದು ಖಾನೇಶುಮಾರಿ ಮನೆ ಮತ್ತು ನಮ್ಮ ತಾತ ವಾಸವಿದ್ದ ಮನೆ. ಈ ಮೇಲಿನ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಆಸ್ತಿಗಳು ಬಂದಿರುವುದಿಲ್ಲ. ನಮ್ಮ ತಾತ ವಾಸವಿದ್ದ ಮನೆಗೆ ಖಾನೇಶುಮಾರಿ ನಂಬರ್ 1966-67 ರಲ್ಲಿ ನೀಡಲಾಗಿತ್ತು. ನಮ್ಮ ತಾತ ವಾಸವಿದ್ದ ಮನೆಯ ಖಾನೇಶುಮಾರಿ ನಂಬರ್ ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರಿನಲ್ಲಿ ಸದರಿ ಮನೆ ಇತ್ತು ಎಂದು ತೋರಿಸಲು ದಾಖಲೆಗಳನ್ನು ಪಡೆದುಕೊಂಡಿದ್ದೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

ನಮ್ಮ ತಾತನ 4 ಜನ ಮಕ್ಕಳು ನಮ್ಮ ತಾತನಿಗೆ ಬಂದಿದ್ದ ಆಸ್ತಿಗಳನ್ನು ಬಾಯಿ ಮಾತಿನಲ್ಲಿ ಸುಮಾರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ. ನನ್ನ ತಂದೆಯನ್ನೊಳಗೊಂಡಂತೆ ಸದರಿ 4 ಜನ ಮಕ್ಕಳು ಸರ್ವೇ ನಂ.46 ರಲ್ಲಿ ತಲಾ ½

ಎಕರೆ ಗಳನ್ನು 4 ಜನರು ಹಂಚಿಕೊಂಡಿರುತ್ತಾರೆ. ನನ್ನ ಪ್ರಕಾರ ನನ್ನ ತಾತನಿಗೆ ಸರ್ವೇ ನಂ.46 ರಲ್ಲಿ 2 ಎಕರೆ ಜಮೀನು ಬಂದಿತ್ತು. ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಬಾಯಿ ಮಾತಿನಲ್ಲಿ ಮಾಡಿಕೊಂಡಿರುತ್ತಾರೆ. ನನ್ನ ತಾತನ ಹೆಸರಿಗೆ ಸದರಿ ಆಸ್ತಿಗೆ ಖಾತೆ ಪಹಣಿ ಆಗಿತ್ತು. ಸದರಿ ಆಸ್ತಿಗೆ ಸಂಬಂಧಿಸಿದ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾತನ 4 ಜನ ಮಕ್ಕಳಿಗೆ ಖಾತೆ ಪಹಣಿ ಆಗಿರುವುದನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ತನ್ನ ತಂದೆಗೆ ಅವರ ಅಣ್ಣ-ತಮ್ಮಂದಿರು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಂದೆಗೆ ಅವರ ಅಣ್ಣ - ತಮ್ಮಂದಿರು ಕ್ರಯ ಪತ್ರ ಬರೆದುಕೊಟ್ಟಿದ್ದರು. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ ನನ್ನ ತಂದೆ ಸರ್ವೇ ನಂ.46 ಕ್ಕೆ ತನ್ನ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆ. ನನ್ನ ತಂದೆ ಫವತಿಯಾದ ನಂತರ ನನ್ನ ಮತ್ತು ನನ್ನ ಸಹೋದರರ ಹೆಸರಿಗೆ ಖಾತೆ ಆಗಿರುತ್ತದೆ. ಸದರಿ ಖಾತೆಯಾಗಿರುವ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಮ್ಮ ತಾತನಿಗೆ ಪೂರ್ವ-ಪಶ್ಚಿಮ 80 ಅಡಿ, ಉತ್ತರ- ದಕ್ಷಿಣ 40 ಅಡಿ ಮನೆ ಬಂದಿತ್ತು. ನಮ್ಮ ತಾತನ ಭಾಗಾಂಶಕ್ಕೆ ಬರುವ ಪೂರ್ವದಲ್ಲೇ ಸದರಿ ಆಸ್ತಿ ಖಾನೇಶುಮಾರಿ ನಂಬರ್ ಆಗಿ ಪಂಚಾಯಿತಿ ಆಗಿ ದಾಖಲಾಗಿತ್ತು. ಸದರಿ ಪಂಚಾಯಿತಿಯಲ್ಲಿ ನನ್ನ ತಾತನ ಹೆಸರಿನಲ್ಲಿ ಖಾತೆ ಆಗಿತ್ತು. ಸದರಿ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಮನೆಯನ್ನು ನನ್ನ

ತಾತನ ಮರಣಾನಂತರ ನನ್ನ ದೊಡ್ಡಪ್ಪ ಬಜ್ಜಯ್ಯ ಊರುಫ್ ಲಕ್ಕಣ್ಣರವರಿಗೆ ಮಾತ್ರ ಬಿಟ್ಟು ಕೊಡಲಾಗಿತ್ತು. ಸದರಿ ನನ್ನ ದೊಡ್ಡಪ್ಪನ ಹೆಸರಿನಲ್ಲಿ ಪಂಚಾಯಿತಿ ಖಾತೆ ಆಗಿತ್ತು. ಸದರಿ ಆಸ್ತಿಯನ್ನು ನನ್ನ ದೊಡ್ಡಪ್ಪ ದಿನಾಂಕಃ26.05.1971 ರಲ್ಲಿ ನನ್ನ ತಂದೆಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆ ನಿಡಿ.2 ಆಗಿರುತ್ತದೆ. ನಮ್ಮ ದೊಡ್ಡಪ್ಪನ ಹೆಸರಿನಲ್ಲಿ ಖಾತೆ ಆದ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಖಾತೆ ನಂ.226/1 ಆಗಿತ್ತು. ಸದರಿ ಖಾತೆ ನಂ.226/1 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ರ ಆಸ್ತಿ ಮೂಲತಃ ಸರ್ವೇ ನಂ.46/15 ಪಾಳು ಮನೆಗೆ ಸಂಬಂಧಿಸಿದ್ದು. ಸರ್ವೇ ನಂ.46/15 ಕ್ಕೆ ಸಂಬಂಧಿಸಿದ ಆಸ್ತಿ ನಮ್ಮ ಕುಟುಂಬಕ್ಕೆ ಬಂದಿತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಡಿ.2 ರ ಆಸ್ತಿಗೂ ಹಾಗೂ ಸರ್ವೇ ನಂ.46/15 ಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

<u>( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.